## ಕರ್ನಾಟಕ ಸರ್ಕಾರ

ಸಂಖ್ಯೆ: ಕಂಇ 73 ಮುನೋಮು 2011

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:29.03.2011.

## ಅಧಿಸೂಚನೆ

ಕರ್ನಾಟಕ ಮುದ್ರಾಂಕ ಕಾಯ್ದೆ 1957ರ (1957 ರ ಕರ್ನಾಟಕ ಕಾಯ್ದೆ 34) ಕಲಂ 9(1)(ಎ)ರನ್ವಯ ಹಾಗೂ ನೋಂದಣಿ ಕಾಯ್ದೆ 1908ರ (1908 ರ ಕೇಂದ್ರೀಯ ಕಾಯ್ದೆ 16) ಕಲಂ 78ರನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ದಿನಾಂಕ: 20-10-2009ರ ಸರ್ಕಾರದ ಆದೇಶ ಸಂಖ್ಯೆ: ಕ ಸಂ ವಾ ಪ್ರ 231 ಪ್ರವಯೋ 2009ರನ್ವಯ, 2009-14ರ ವರೆಗೆ ಜಾರಿಯಲ್ಲಿರುವಂತೆ ಪ್ರವಾಸೋಧ್ಯಮ ನೀತಿ ಪ್ರಕಟಿಸಲಾಗಿದ್ದು, ಈ ನೀತಿಯನ್ವಯ ಪ್ರವಾಸೋಧ್ಯಮಕ್ಕೆ ಬಂಡವಾಳ ಹೂಡುವುದನ್ನು ಉತ್ತೇಜನ ನೀಡುವ ದೃಷ್ಟಿಯಿಂದ ಪ್ರವಾಸೋಧ್ಯಮ ನೀತಿ 2009-14ರಲ್ಲಿ ನಿರ್ಧಿಷ್ಟ ಪಡಿಸಿದಂತೆ ಸ್ಥಾಪಿಸಲಾಗುವ ಪ್ರವಾಸೋಧ್ಯಮ ಘಟಕಗಳಿಗೆ / ಯೋಜನೆಗಳಿಗೆ ಸಂಬಂಧಿಸಿದಂತೆ ಬರೆದುಕೊಡುವ ಕ್ರಯ, ಗುತ್ತಿಗೆ ಮತ್ತು ಆಧಾರ ದಸ್ತಾವೇಜುಗಳಿಗೆ, ವಿಧಿಸಲಾಗುವ ಮುದ್ರಾಂಕ ಶುಲ್ಕದಲ್ಲಿ ವಿನಾಯಿತಿ ಮತ್ತು ನೋಂದಣಿ ಶುಲ್ಕದಲ್ಲಿ ರಿಯಾಯಿತಿ ಈ ಕೆಳಕಂಡಂತೆ ನೀಡಿ ಆದೇಶಿಸಿದೆ. ........

i. ₹.50 ಕೋಟಿಗಳಗಿಂತ ಕಡಿಮೆ ಬಂಡವಾಳ ಹೊಂದಿರುವ ಪ್ರವಾಸೋಧ್ಯಮ ಘಟಕಗಳಿಗೆ / ಯೋಜನೆಗಳಿಗೆ ಸಂಬಂಧಿಸಿದಂತೆ ಬರೆದುಕೊಡುವ ಕ್ರಯ, ಗುತ್ತಿಗೆ ಮತ್ತು ಆಧಾರ ದಸ್ತಾವೇಜುಗಳಿಗೆ, ವಿಧಿಸಲಾಗುವ ಮುದ್ರಾಂಕ ಶುಲ್ಕದಲ್ಲಿ ಶೇ. 50ರಷ್ಟು ವಿನಾಯ್ತಿ ನೀಡಿದೆ.

ii. ₹.50 ಕೋಟಿ ಹಾಗೂ ಇನ್ನೂ ಹೆಚ್ಚಿನ ಬಂಡವಾಳ ಹೊಂದಿರುವ ಪ್ರವಾಸೋಧ್ಯಮ ಘಟಕಗಳಿಗೆ / ಯೋಜನೆಗಳಿಗೆ ಸಂಬಂಧಿಸಿದಂತೆ ಬರೆದುಕೊಡುವ ಕ್ರಯ, ಗುತ್ತಿಗೆ ಮತ್ತು ಆಧಾರ ದಸ್ತಾವೇಜುಗಳಿಗೆ, ವಿಧಿಸಲಾಗುವ ಮುದ್ರಾಂಕ ಶುಲ್ಕದಲ್ಲಿ ಶೇ. 75ರಷ್ಟು ವಿನಾಯ್ತಿ ನೀಡಿದೆ.

iii. ವಲಯ (ಜೋನ್) 3 ಮತ್ತು ವಲಯ 4 ಇವುಗಳಲ್ಲಿನ ₹.10 ಕೋಟಿಗಳ ಮೇಲ್ಪಟ್ಟ ಬಂಡವಾಳ ಹೊಂದಿರುವ ಪ್ರವಾಸೋಧ್ಯಮ ಘಟಕಗಳಿಗೆ /ಯೋಜನೆಗಳಿಗೆ ಸಂಬಂಧಿಸಿದಂತೆ ಬರೆದುಕೊಡುವ ಕ್ರಯ, ಗುತ್ತಿಗೆ ಮತ್ತು ಆಧಾರ ದಸ್ತಾವೇಜುಗಳಿಗೆ, ವಿಧಿಸಲಾಗುವ ಮುದ್ರಾಂಕ ಶುಲ್ಕದಲ್ಲಿ ಶೇ. 75ರಷ್ಟು ವಿನಾಯ್ತಿ ನೀಡಿದೆ.

iv. ಕೈಗಾರಿಕಾ ನೀತಿ 2009-14 ರಲ್ಲಿ ಒದಗಿಸಿರುವಂತೆ (ಅನುಬಂಧ IV ರಲ್ಲಿರುವಂತೆ) ನೋಂದಣಿ ವೆಚ್ಚಗಳಿಗೆ ವಿನಾಯ್ತಿ / ರಿಯಾಯಿತಿ ನೀಡಿದೆ.

<u>ನೋಂದಣಿ ಶುಲ್ಕದಲ್ಲಿ ರಿಯಾಯ್ತಿ:</u> ಸದರಿ ಪ್ರವಾಸೋಧ್ಯಮ ಘಟಕಗಳಿಗೆ / ಯೋಜನೆಗಳಿಗೆ ಸಂಬಂಧಿಸಿದಂತೆ, ಬರೆದುಕೊಡುವ ಕ್ರಯ, ಗುತ್ತಿಗೆ ಮತ್ತು ಆಧಾರ ದಸ್ತಾವೇಜುಗಳಿಗೆ, ಮೇಲ್ಕಂಡಂತೆ ಮುದ್ರಾಂಕ ಶುಲ್ಕ ವಿನಾಯಿತಿಗೆ ಅರ್ಹವಿರುವ ದಸ್ತಾವೇಜುಗಳಿಗೆ ಪ್ರತಿ ₹. 1000/- ಗಳ ಮೌಲ್ಯಕ್ಕೆ ₹.1/-ರಂತೆ ನೋಂದಣಿ ಶುಲ್ಕ ವಿಧಿಸುವುದು.

ಮುದ್ರಾಂಕ ಮತ್ತು ನೋಂದಣಿ ಶುಲ್ಕ ವಿನಾಯ್ತಿ / ರಿಯಾಯಿತಿ ಪಡೆಯಲು ಪ್ರವಾಸೋಧ್ಯಮ ಇಲಾಖೆಯ ಅಧಿಕಾರಿಗಳಿಂದ ದೃಢೀಕರಿಸಲ್ಪಟ್ಟ ಪ್ರಪತ್ರವನ್ನು / ಪ್ರಮಾಣ ಪತ್ರವನ್ನು ದಸ್ತಾವೇಜು ನೋಂದಣಿ ಸಮಯದಲ್ಲಿ ಕಡ್ಡಾಯವಾಗಿ ಒದಗಿಸುವುದು. ಈ ಪ್ರಪತ್ರದಲ್ಲಿ ಪ್ರಮಾಣೀಕರಿಸಿದ ಮಾಹಿತಿಯ ಆಧಾರದ ಮೇಲೆ ಮಾತ್ರ ಮುದ್ರಾಂಕ ಶುಲ್ಕ / ನೋಂದಣಿ ಶುಲ್ಕ ವಿನಾಯ್ತಿ / ರಿಯಾಯಿತಿ ನೀಡುವ ಬಗ್ಗೆ ಪರಿಶೀಲಿಸಿ ದಸ್ತಾವೇಜುಗಳನ್ನು ನೋಂದಣಿ ಮಾಡತಕ್ಕದ್ದು.

..2..

ಈ ವಿನಾಯಿತಿ / ರಿಯಾಯಿತಿಯು ದಿನಾಂಕ: 01-04-2011ರಿಂದ 31-03-2014ರವರೆಗೆ ಮಾತ್ರ ಜಾರಿಯಲ್ಲಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಟಿ.ಕೆ. ರಾಮಚಂದ್ರ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ
(ನೋಂದಣಿ ಮತ್ತು ಮುದ್ರಾಂಕ)

ಇವರಿಗೆ: ಸಂಕಲನಕಾರರು ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು – ಮುಂದಿನ ವಿಶೇಷ ಸಂಚಿಕೆಯಲ್ಲಿ ಪ್ರಕಟಿಸಲು ಹಾಗೂ 1000 ಪ್ರತಿಗಳನ್ನು ಒದಗಿಸಲು ಕೋರಿದೆ.

ಪ್ರತಿ:

1) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
3) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ, ಬೆಂಗಳೂರು.
4) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ಬೆಂಗಳೂರು.
5) ಸರ್ಕಾರದ ಕಾರ್ಯದರ್ಶಿಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ.
6) ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು, ಬೆಂಗಳೂರು.
7) ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ – ಇಲಾಖೆಯ ಎಲ್ಲಾ ಜಂಟಿ ನಿರ್ದೇಶಕರು ಹಾಗೂ ಉಪ ನಿರ್ದೇಶಕರುಗಳಿಗೆ ಈ ಆದೇಶದ ಪ್ರತಿಯನ್ನು ಕಳುಹಿಸಿಕೊಡುವಂತೆ ನಿರ್ದೇಶನ ನೀಡಲಾಗಿದೆ.
8) ರಾಜ್ಯದ ಎಲ್ಲಾ ಜಿಲ್ಲಾ ನೋಂದಣಾಧಿಕಾರಿಗಳು / ಎಲ್ಲಾ ಉಪನೋಂದಣಾಧಿಕಾರಿಗಳು – ನೋಂದಣಿ ಮಹಾಪರಿವೀಕ್ಷಕರ ಮುಖಾಂತರ.
9) ಮಾನ್ಯ ಕಂದಾಯ / ಕೈಗಾರಿಕಾ / ಪ್ರವಾಸೋದ್ಯಮ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ ಬೆಂಗಳೂರು.
10) ಸರ್ಕಾರದ ಕಾರ್ಯದರ್ಶಿಗಳು, ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ) ಇವರ ಪತ್ರಾಂಕಿತ ಆಪ್ತ ಸಹಾಯಕರು.
11) ಸರ್ಕಾರದ ಉಪ ಕಾರ್ಯದರ್ಶಿಗಳು, ಕಂದಾಯ ಇಲಾಖೆ ಇವರ ಆಪ್ತ ಸಹಾಯಕರು.
12) ಶಾಖಾ ರಕ್ಷಕ ಕಡತ / ಹೆಚ್ಚುವರಿ ಪ್ರತಿಗಳು.